# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಟಿ.ದಾಸರಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ
ಮಾರಮ್ಮ ದೇವಸ್ಥಾನದ ಹತ್ತಿರ, ಬಾಗಲಗುಂಟೆ

ಸಂಖ್ಯೆ:ಬೃ.ಬೆಂ.ಮ.ಪಾ/ದಾ.ವ/ಸ.ಅ/ವಾ.14/ಪಿಆರ್: 13 :2020-21 ದಿನಾಂಕ: 17.04.2021

## ಬಾಗಲಗುಂಟೆ ವಾರ್ಡ್-14ರ ವಾರ್ಡ್ ಸಭೆಯ ನಡವಳಿ

ದಿ.17.04.2021 ರಂದು ಬೆಳಗ್ಗೆ 11.30 ಗಂಟೆಗೆ ಶ್ರೀ.ಕೆ.ಮರುಳಸಿದ್ದಪ್ಪ, ವಾರ್ಡ್ ಕಮಿಟಿ ನೋಡೆಲ್ ಆಫೀಸರ್ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಹಾಜರಿದ್ದವರು:**

1. ಶ್ರೀ.ವೆಂಕಟೇಶಪ್ಪ, ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ಬಾಗಲಗುಂಟೆ ವಾರ್ಡ್ ನಂ.14
2. ಶ್ರೀ.ಮೋಹನ್, ಹಿರಿಯ ಆರೋಗ್ಯ ಪರಿವೀಕ್ಷಕರು, ಬಾಗಲಗುಂಟೆ ಹಾಗೂ ವಾರ್ಡ್ ಸಮಿತಿ ಸದಸ್ಯರು
3. ಶ್ರೀ.ಕಮಲ್ ಗದ್ದಿಮನಿ, ಕಿರಿಯ ಆರೋಗ್ಯ ಪರಿವೀಕ್ಷಕರು, ಬಾಗಲಗುಂಟೆ ಹಾಗೂ ವಾರ್ಡ್ ಸಮಿತಿ ಸದಸ್ಯರು
4. ಶ್ರೀಮತಿ.ಚೇತನ ಕುಮಾರಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬಾಗಲಗುಂಟೆ
5. ಶ್ರೀ.ವೆಂಕಟರಾಯಪ್ಪ , ಬಿಬಿಎಂಪಿ, ಕಲ್ಯಾಣ ಶಾಖೆ ಬೆಂಗಳೂರು
6. ಶ್ರೀ.ಕೆ.ಎನ್.ರಾಜಪ್ಪ, ಅರಣ್ಯ ಇಲಾಖೆ, ಬಿಬಿಎಂಪಿ, ಬೆಂಗಳೂರು
7. ಶ್ರೀ.ಶಿವಲಿಂಗೇಗೌಡ, ತೋಟಗಾರಿಕೆ ಇಲಾಖೆ, ಬಿಬಿಎಂಪಿ, ಬಾಗಲಗುಟೆ
8. ಶ್ರೀ.ಮಂಜುನಾಥರೆಡ್ಡಿ, ಬೆಸ್ಕಾಂ, ಬೆಂಗಳೂರು
9. ಶ್ರೀ.ಪಂಚಾಕ್ಷರಿ ಬಿ, ಪೋಲೀಸ್ ಇಲಾಖೆ, ಬಾಗಲಗುಂಟೆ, ಬೆಂಗಳೂರು
10. ಡಾ|| ಚಂದನ, ಕೋವಿಡ್ ಮೆಡಿಕಲ್ ಆಫೀಸರ್
11. ಶ್ರೀ.ಕೃಷ್ಣಮೂರ್ತಿ ಬಿ, ಡಿಫೆನ್ಸ್ ಕಾಲೋನಿ, ನಾಗರೀಕ ಕ್ಷೇಮಾಭಿವೃದ್ಧಿ ಸಂಘ
12. ಶ್ರೀ.ಲಕ್ಷ್ಮಿ ವೆಂಕಟೇಶ್, ಮುನಿಕೊಂಡಪ್ಪ ಬಡಾವಣೆ
13. ಶ್ರೀ.ಭದ್ರಯ್ಯ, ಸಂಚಾರಿ ಪೋಲಿಸ್ ಉಪನಿರೀಕ್ಷಕರು
14. ಶ್ರೀ.ವೀರಪ್ಪ, ಸಂಚಾರಿ ಪೋಲಿಸ್

ಶ್ರೀ.ಕೆ.ಮರುಳಸಿದ್ದಪ್ಪ, ನೋಡೆಲ್ ಅಧಿಕಾರಿ, ವಾರ್ಡ್ ನಂ.14, ಬಾಗಲಗುಂಟೆ ರವರು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು ಹಾಜರಿದ್ದ ಅಧಿಕಾರಿಗಳನ್ನು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

### 1. ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಹಾಗೂ ದೂರುಗಳಿಗೆ ಸಂಬಂಧಪಟ್ಟಂತೆ ತೆಗೆದುಕೊಂಡ ಕ್ರಮಗಳ ಬಗ್ಗೆ.

2021-22ನೇ ಸಾಲಿನ ಆಯವ್ಯಯಕ್ಕೆ ಸಂಬಂಧಪಟ್ಟಂತೆ ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ಬಗ್ಗೆ ವಾರ್ಡ್ ಸಭೆಯ ಸದಸ್ಯರುಗಳು ನೀಡಿದ ಸಲಹೆ/ಸೂಚನೆಗಳನ್ನು ಪರಿಶೀಲಿಸಿ ಕ್ರಮ ವಹಿಸುವಂತೆ ನೋಡೆಲ್ ಅಧಿಕಾರಿಗಳು ವಾರ್ಡ್ ಅಭಿಯಂತರರಿಗೆ ಸೂಚಿಸಿದರು. ಹಾಗೂ ಎಂ.ಇ.ಐ ಬಡಾವಣೆ 18ನೇ ಮುಖ್ಯರಸ್ತೆ, ಬಾಗಲಗುಂಟೆ 22ನೇ ಅಡ್ಡರಸ್ತೆ & ಭುವನೇಶ್ವರಿನಗರದ 9ನೇ ಮತ್ತು 10ನೇ ಮುಖ್ಯರಸ್ತೆಗಳಲ್ಲಿ ರಸ್ತೆಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಎಂದು ವಾರ್ಡ್ ಅಭಿಯಂತರರು ಸಭೆಯಲ್ಲಿ ತಿಳಿಸಿದರು.



Scanned by CamScanner

## 2. ಕೋವಿಡ್-19 ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ.

ವಾರ್ಡ್‌ನ ಆರೋಗ್ಯ ಪರಿವೀಕ್ಷಕರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಚರ್ಚಿಸಿ ಬಾಗಲಗುಂಟೆ ವಾರ್ಡ್ ನಂ.14ರ ವ್ಯಾಪ್ತಿಯಲ್ಲಿ ಒಟ್ಟು ಫಾಸಿಟಿವ್ ಕೇಸ್ 3105, ಬಿಡುಗಡೆ 2817 ಹಾಗೂ ಒಟ್ಟು Active case ಪ್ರಕರಣಗಳು 240 ಮರಣ-48 ಇರುತ್ತದೆಂದು ಸಭೆಯಲ್ಲಿ ತಿಳಿಸಿದರು. ಸಾರ್ವಜನಿಕರು ಹೆಚ್ಚಾಗಿ ಆಗಮಿಸುವ ಪ್ರದೇಶಗಳಲ್ಲಿ ತಾತ್ಕಾಲಿಕ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕ್ರಮವಹಿಸಿರುವ ಬಗ್ಗೆ ಸಭೆಯಲ್ಲಿ ತಿಳಿಸಲಾಯಿತು. ಹಾಗೂ ಕಡ್ಡಾಯವಾಗಿ ಮಾಸ್ಕ್ ಧರಿಸುವ ಸಂಬಂಧ ಪೀಲ್ಡ್ ಮಾರ್ಷಲ್‌ಗಳ ಸಮನ್ವಯದೊಂದಿಗೆ ಜನಜಾಗೃತಿ ಮೂಡಿಸಲಾಗುತ್ತಿದೆ ಹಾಗೂ ಮಾಸ್ಕ್ ಧರಿಸದೇ ಸಾರ್ವಜನಿಕವಾಗಿ ಓಡಾಡುವವರಿಗೆ ರೂ.250.00 ಗಳನ್ನು ದಂಢ ವಿಧಿಸಿ ಕ್ರಮ ಜರುಗಿಸಲಾಗುತ್ತಿರುತ್ತದೆ ಎಂದು ಸಭೆಯಲ್ಲಿ ವಿವರಿಸಿದರು.

## 3. ವಾರ್ಡ್ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಹಾಗೂ ರಸ್ತೆಗುಂಡಿ ಮುಚ್ಚುವ ಬಗ್ಗೆ.

ಬಾಗಲಗುಂಟೆ ವಾರ್ಡ್ ನಂ.14ರಲ್ಲಿ ಈಗಾಗಲೇ ಸಿಡೇದಹಳ್ಳಿ ಮುಖ್ಯರಸ್ತೆ, ಡಿಫೆನ್ಸ್ ಕಾಲೋನಿ, ಮುನೇಶ್ವರನಗರ ರಸ್ತೆಗಳಲ್ಲಿ ಡಾಂಬರೀಕರಣ ಕಾಮಗಾರಿ ಕೈಗೊಂಡಿದ್ದು ಬಾಕಿ ಉಳಿದಿರುವ ಬಡಾವಣೆಗಳಲ್ಲಿ ರಸ್ತೆಗುಂಡಿ ಮುಚ್ಚುವ ಕಾಮಗಾರಿಯನ್ನು ಆಧ್ಯತೆಯ ಮೇಲೆ ಕೈಗೊಳ್ಳುವುದಾಗಿ ವಾರ್ಡ್ ಅಭಿಯಂತರರರು ಸಭೆಯಲ್ಲಿ ತಿಳಿಸಿದರು.

## 4. ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ.

ವಾರ್ಡ್ ನಂ 14 ರ ವಾಪ್ತಿಯಲ್ಲಿ ವಾಸವಾಗಿರುವ ಸಫಾಯಿ ಕರ್ಮಚಾರಿಗಳು, ತೃತೀಯ ಲಿಂಗಿಗಳು, ಪೌರಕಾರ್ಮಿಕರುಗಳಿಗೆ ಸವಲತ್ತುಗಳನ್ನು ಹಾಗೂ ಅರ್ಹ ಫಲಾನುಭವಿಗಳಿಗೆ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ಉಚಿತವಾಗಿ ಮನೆಗಳನ್ನು ನಿರ್ಮಿಸಲು ಕ್ರಮವಹಿಸಲಾಗುತ್ತಿದೆ ಎಂದು ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಶ್ರೀ ವೆಂಕಟರಾಯಪ್ಪ ರವರು ಸಭೆಯಲ್ಲಿ ತಿಳಿಸಿದರು.

## ಇತರೆ ವಿಷಯಗಳ ಬಗ್ಗೆ.

1. ಶ್ರೀ.ಕೃಷ್ಣಮೂರ್ತಿ, ಡಿಫೆನ್ಸ್ ಕಾಲೋನಿ, ನಾಗರೀಕ ಕ್ಷೇಮಾಭಿವೃದ್ಧಿ ಸಂಘ ರವರು ಹೆಸರಘಟ್ಟ ಮುಖ್ಯರಸ್ತೆ, ಡಾಮಿನೋಸ್ ಹತ್ತಿರ, ಎಸ್.ಬಿ.ಐ ಬ್ಯಾಂಕ್ ಭುವನೇಶ್ವರಿನಗರದ ಹತ್ತಿರ ವಾಹನಗಳನ್ನು ನಿಲುಗಡೆ ಮಾಡುತ್ತಿದ್ದು, ಇದು ಪಾರ್ಕಿಂಗ್ ಸ್ಥಳವಾಗಿ ಮಾರ್ಪಾಡಾಗಿರುತ್ತದೆ. ಇದರಿಂದ ಇಲ್ಲಿ ಓಡಾಡುವ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಬಗ್ಗೆ ಅಗತ್ಯ ಕ್ರಮವಹಿಸಲು ಕ್ರಮವಹಿಸಲು ತಿಳಿಸಬೇಕಾಗಿ ನೋಡೆಲ್ ಅಧಿಕಾರಿರವರು ಹಾಜರಿದ್ದ Traffice Police ರವರಿಗೆ ಸೂಚಿಸಿದರು.
2. ಬಾಗಲಗುಂಟೆ ವಾರ್ಡ್ ನಂ.14ರಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ವತಿಯಿಂದ ಒಳಚರಂಡಿ ಸಂಪರ್ಕಕ್ಕಾಗಿ ಪೈಪ್‌ಲೈನ್ ಅಳವಡಿಸುತ್ತಿದ್ದು, ಸದರಿ ಕಾಮಗಾರಿಯನ್ನು ನಿರ್ವಹಿಸಿದ ನಂತರ Restore ಮಾಡಲೇಬೇಕೆಂದು ಸಭೆಯಲ್ಲಿ ಎಲ್ಲಾ ವಾರ್ಡ್ ಸದಸ್ಯರುಗಳು ಒಮ್ಮತದಿಂದ ಕೋರಿದರು. ಸದರಿ ವಿಷಯಕ್ಕೆ ಶ್ರೀಮತಿ.ಚೇತನ ಕುಮಾರಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರು ಪ್ರತಿಕ್ರಿಯಿಸಿ ತುರ್ತಾಗಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿದರು.
3. ಎಲ್ಲಾ ವಾರ್ಡ್ ಸದಸ್ಯರುಗಳು ವಾರ್ಡ್ ವ್ಯಾಪ್ತಿಯಲ್ಲಿ ಎಷ್ಟು ಗಿಡಗಳನ್ನು ನೆಟ್ಟಿದ್ದಾರೆ ಹಾಗೂ ಸದರಿ ಗಿಡಗಳಿಗೆ ನೀರು ಹಾಕುತ್ತಿರುವ ಬಗ್ಗೆ ತಿಳಿಸಲು ಸಭೆಯಲ್ಲಿ ಕೋರಿದರು. ಸದರಿ ವಿಷಯಕ್ಕೆ ಶ್ರೀ.ರಾಜಪ್ಪ, ವಲಯ ಅರಣ್ಯ ಅಧಿಕಾರಿ ರವರು ಪ್ರತಿಕ್ರಿಯಿಸಿ, ಹಾಲಿ ವಾರ್ಡ್ ವ್ಯಾಪ್ತಿಯ 5 ಪ್ಯಾಕೇಜ್ ಅಡಿಯಲ್ಲಿ ವಿವಿಧ ಬಡಾವಣೆಗಳಲ್ಲಿ ಗಿಡಗಳನ್ನು ನೆಟ್ಟಿದ್ದು, ಸದರಿ ಗಿಡಗಳಿಗೆ ನೀರನ್ನು ಹಾಕುತ್ತಿದ್ದು, ನಿರ್ವಹಣೆ ಕೆಲಸವನ್ನು ಮಾಡಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು. ವಾರ್ಡ್ ವಾಪ್ತಿಯಲ್ಲಿ ನೆಡಲಾಗಿರುವ ಗಿಡಗಳ ಬಗ್ಗೆ ಪರಿಶೀಲಿಸಿ ಶೇ100 ರಷ್ಟು ಗಿಡಗಳು ಬೆಳೆಯಲು ಅಗತ್ಯ ಕ್ರಮವಹಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.
4. ಬೆಸ್ಕಾಂ ಇಲಾಖೆ ರವರು ವಾರ್ಡ್ ವ್ಯಾಪ್ತಿಯಲ್ಲಿ ಕೇಬಲ್‌ಗಳನ್ನು ಅಳವಡಿಸಲು ಬಿಬಿಎಂಪಿ ವತಿಯಿಂದ ಯಾವುದೇ ರೀತಿಯ ಅನುಮತಿಯನ್ನು ಪಡೆಯದೇ ರಸ್ತೆಯನ್ನು ಅಗೆಯುತ್ತಿರುವ ಬಗ್ಗೆ ಚರ್ಚಿಸಲಾಯಿತು. ಈ ಬಗ್ಗೆ ಪರಿಶೀಲಿಸಲು ಹಾಗೂ ರಸ್ತೆ ಅಗೆದ ಭಾಗಗಳನ್ನು ಕೂಡಲೇ ಸಂಬಂಧಪಟ್ಟ ಇಲಾಖೆಯಿಂದ ಮುಚ್ಚಿಸುವ ಬಗ್ಗೆ ಕ್ರಮವಹಿಸುವಂತೆ ನೋಡೆಲ್ ಅಧಿಕಾರಿಗಳು ಸೂಚಿಸಿದರು.

Scanned by CamScanner

5. ವಾರ್ಡ್ ಸದಸ್ಯರುಗಳು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಬಾಗಲಗುಂಟೆ ಕಟ್ಟಡದ ಮೊದಲನೇ ಮಹಡಿಯಲ್ಲಿ ಹಿರಿಯ ನಾಗರೀಕ ಕಛೇರಿ ಇದ್ದು, ಸದರಿ ಕಛೇರಿಯನ್ನು 2ನೇ ಮಹಡಿಗೆ ಸ್ಥಳಾಂತರಿಸಿ, ಮೊದಲನೇ ಮಹಡಿಯನ್ನು ಆಸ್ಪತ್ರೆಗೆ ಬಿಟ್ಟುಕೊಡಲು ಸಭೆಯಲ್ಲಿ ತಿಳಿಸಿದರು, ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸಲು ವಾರ್ಡ್ ಅಭಿಯಂತರರಿಗೆ ನೋಡೆಲ್ ಅಧಿಕಾರಿ ರವರು ಸೂಚಿಸಿದರು.

6. ವಾರ್ಡ್ ಸದಸ್ಯರುಗಳು ಡಿಫೆನ್ಸ್ ಕಾಲೋನಿ ಹಾಗೂ ಮುನಿಕೊಂಡಪ್ಪ ಬಡಾವಣೆಗಳಲ್ಲಿನ ರಸ್ತೆಗಳಿಗೆ ತುರ್ತಾಗಿ ಡಾಂಬರೀಕರಣ ಕಾಮಗಾರಿ ಕೈಗೊಳ್ಳಲು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಅಗತ್ಯ ಕ್ರಮವಹಿಸುವಂತೆ ನೋಡೆಲ್ ಅಧಿಕಾರಿಗಳು ವಾರ್ಡ್ ಅಭಿಯಂತರರಿಗೆ ಸೂಚಿಸಿದರು.

7. ವಾರ್ಡ್ ಸದಸ್ಯರುಗಳು ಬಾಗಲಗುಂಟೆ ವಾರ್ಡ್ ನಂ.14ರಲ್ಲಿ ಚರಂಡಿಗಳಲ್ಲಿ ತುಂಬಿರುವ ಹೂಳನ್ನು ತೆಗೆಯುವ ಕಾರ್ಯವನ್ನು ನಿರ್ವಹಿಸಲು ಉಪಯೋಗಿಸಿಕೊಳ್ಳುತ್ತಿರುವ ಕೂಲಿ ಆಳುಗಳ ಸಂಖ್ಯೆ ಕಡಿಮೆ ಇದ್ದು, ಇದರಿಂದ ವಾರ್ಡ್ ವ್ಯಾಪ್ತಿಯಲ್ಲಿನ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗುತ್ತಿರುವುದಿಲ್ಲ ಆದುದರಿಂದ ಹೆಚ್ಚುವರಿಯಾಗಿ ಕೂಲಿಯಾಳುಗಳ ವ್ಯವಸ್ಥೆಯನ್ನು ಮಾಡಲು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಪರಿಶೀಲಿಸಿ ಹೆಚ್ಚುವರಿ ಕೂಲಿ ಆಳುಗಳನ್ನು ನಿಯೋಜಿಸಿಕೊಳ್ಳಲು ಪ್ರಸ್ತಾವನೆಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿ ಅನುಮೋದನೆ ಸಲ್ಲಿಸಲು ನೋಡೆಲ್ ಅಧಿಕಾರಿಗಳು ವಾರ್ಡ್ ಅಭಿಯಂತರರಿಗೆ ಸೂಚಿಸಿದರು.

8. ವಾರ್ಡ್ ಸದಸ್ಯರುಗಳು ಬಾಗಲಗುಂಟೆ ವಾರ್ಡ್ ನಂ.14ರ ಭುವನೇಶ್ವರಿನಗರ ವ್ಯಾಪ್ತಿಯಲ್ಲಿ ಬೆಸ್ಕಾಂ ಇಲಾಖಾ ವತಿಯಿಂದ ರಸ್ತೆಯಲ್ಲಿ ಕೇಬಲ್‌ಗಳನ್ನು ಅಳವಡಿಸುತ್ತಿದ್ದು, ರಸ್ತೆಯಲ್ಲಿ ಓಡಾಡಲು ಸಾರ್ವಜನಿಕರಿಗೆ ಹಾಗೂ ವಾಹನ ಸವಾರರರಿಗೆ ತುಂಬಾ ತೊಂದರೆ ಉಂಟಾಗುತ್ತಿರುತ್ತದೆ. ಹಾಗೂ ಕೇಬಲ್ ಅಳವಡಿಸುವ ಸಮಯದಲ್ಲಿ ನೀರಿನ ಪೈಪ್‌ಗಳು ಒಡೆದು ಹೋಗಿದ್ದು, ಕುಡಿಯುವ ನೀರಿಗೆ ಹಾಗೂ ದೈನಂದಿನ ಬಳಕೆಗೆ ತೊಂದರೆ ಉಂಟಾಗುತ್ತಿರುತ್ತದೆ ಮತ್ತು ಸ್ಯಾನಿಟರಿ ಪೈಪ್‌ಗಳು ಸಹ ಒಡೆದು ಹೋಗಿದ್ದು, ತುಂಬಾ ತೊಂದರೆ ಆಗುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳಿಗೆ ಈ ಬಗ್ಗೆ ಕೂಡಲೇ ಕ್ರಮ ವಹಿಸುವಂತೆ ನೋಡೆಲ್ ಅಧಿಕಾರಿಗಳು ಸೂಚಿಸಿದರು.

ಅಂತಿಮವಾಗಿ ನೋಡೆಲ್ ಅಧಿಕಾರಿ ರವರು ಮಾತನಾಡಿ, ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಸ್ಪಂದಿಸಿ ಬಗೆಹರಿಸಲು ಎಲ್ಲಾ ಇಲಾಖೆಗಳು ಸಮನ್ವಯತೆ ಸಾಧಿಸಿ ಕೆಲಸ ನಿರ್ವಹಿಸಲು ಸಭೆಯಲ್ಲಿ ಸೂಚಿಸಲಾಯಿತು.

ವಂದನಾರ್ಪಣೆಯೊಂದಿಗೆ ನೋಡೆಲ್ ಅಧಿಕಾರಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

17/04/21

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 14, ಬಾಗಲಗುಂಟೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

17/4

ನೋಡಲ್ ಅಧಿಕಾರಿ ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು, ವಾ.ನಂ.14, ಬಾಗಲಗುಂಟೆ
ಮತ್ತು ಕಾರ್ಯಪಾಲಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಅಧಿಕಾರಿಗಳ ಮಾಹಿತಿಗಾಗಿ</u>

1) ಮಾನ್ಯ ವಿಶೇಷ ಆಯುಕ್ತರು, ಬಿಬಿಎಂಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
2) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
4) ಉಪ ನಿಯಂತ್ರಕರು (ಹಣಕಾಸು) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ.
5) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು (ಟಿ.ದಾ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ
7) ಸಹಾಯಕ ಕಂದಾಯ ಅಧಿಕಾರಿ (ದಾ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಸಲ್ಲಿಸಿದೆ.
10) ಕಛೇರಿ ಪ್ರತಿ.

Scanned by CamScanner